ಕಾಯದೆ ಕೃಷ್ಣೇಗೌಡರು ಪಾರ್ಕಿನಲ್ಲಿ ಸುತ್ತಾಡಿ ಮನೆಗೆ ಬಂದಾಗ ಸುನಂದಮ್ಮ ಕಾಫಿ ಲೋಟವನ್ನು ಕೈಯಲ್ಲೇ ಹಿಡಿದು ನಿಂತಿದ್ದರು. 'ಮುಕುಂದ ಏನಂದ' ಅಂದಾಗ, 'ಅವನಿಗೆ ಇಷ್ಟವಾಗಿಲ್ಲ, ಬೆಲೆನೂ ಜಾಸ್ತಿ ಅಂತಾನೆ' ಎಂದರು. ಇಬ್ಬರೂ ಕಾಫಿ ಕುಡಿಯತೊಡಗಿದರು. 'ಇವತ್ತು ಫೈನಲ್ ಮಾಡಿಬಿಡಬೇಕು. ಬೇರೆ ಯಾರಾರೂ ಕೈ ಹಾಕಕೆ ಮೊದ್ಲು. ಮುಕುಂದನ ಮೊಬೈಲಲ್ಲಿ ಅವರ ನಂಬರ್ ಇದೆ. ಅವನು ಎದ್ದನಾ ನೋಡು, ನಾನು ಸ್ನಾನಕ್ಕೆ ಹೋಗ್ತೀನಿ.'

ಕೊಳ್ಳಬೇಕೂಂತ ಇರೋವನು ಮಗ. ಅವನ ಸಂಪಾದನೆ, ಅವನ ದುಡ್ಡು, ಅವನಿಗೇ ಇಷ್ಟವಿಲ್ಲಾ ಅಂದಮೇಲೆ... ಇವರ್‍ಯಾಕೆ ಇಷ್ಟು ಅರ್ಜೆಂಟು ಮಾಡ್ತಿದಾರೆ. ಇದಲ್ಲದಿದ್ರೆ ಇನ್ನೊಂದು ನೋಡಿದ್ರಾಯ್ತು ಅಂದುಕೊಂಡರು ಸುನಂದಮ್ಮ. ಯಾವುದೇ ವಿಷಯಕ್ಕೂ ಇವರ ಕುಟುಂಬದಲ್ಲಿ ಇಷ್ಟೂ ವರ್ಷಗಳಲ್ಲಿ ಎಂದೂ ಎದುರು ಮಾತುಗಳು, ವಾದವಿವಾದಗಳು, ಕೋಪತಾಪಗಳು ಇದ್ದಿದ್ದಿಲ್ಲ. ಮುಕುಂದ ಅಪ್ಪನ ಬಗ್ಗೆ ಅಪಾರ ಅಕ್ಕರೆಯುಳ್ಳವನು. ಬಾಲ್ಯದಿಂದಲೂ ಅವನ ಯಾವ ಆಸೆಗಳನ್ನು, ಬೇಡಿಕೆಗಳನ್ನೂ ಅವರು ತೆಗೆದು ಹಾಕಿದ್ದಿಲ್ಲ. ಇಂಥ ಅಪ್ಪ ಅಮ್ಮ ನನ್ನ ಅದೃಷ್ಟದಿಂದ ಸಿಕ್ಕಿದ್ದಾರೆ ಎಂಬ ಭಾವನೆಯನ್ನು ತನ್ನ ಕಾಲೇಜು ದಿನಗಳಿಂದಲೇ ತಳೆದಿದ್ದವನು.

ತನ್ನ ಮೊಬೈಲಿನಲ್ಲಿದ್ದ ನಂಬರನ್ನು ಹುಡುಕುವ ಮುನ್ನ 'ಬೆಲೆ ಜಾಸ್ತಿಯಾಯ್ತು ಅನಿಸುತ್ತೆ ಅಪ್ಪ' ಅಂದ.

'ಏನಿಲ್ಲ ಕಣೋ, ನೋಡು ಬೇಕಿದ್ದರೆ ನಮ್ಮ ಈ ಮನೇನ ನಿನ್ನ ಹೆಸರಿಗೆ ಮಾಡ್ಸಿಕೊಡೋಣಂತೆ, ನಿನ್ನ ಹತ್ರ ಇರೋ ಫಂಡ್ಸ್ ಸಾಲದಿದ್ದರೆ ನಾನು ಉಳಿದಿದ್ದು ಕೊಡ್ತೀನಿ, ಅವರ ನಂಬರ್ ಕನೆಕ್ಟ್ ಮಾಡಿಕೊಡು. ಬೇರೆ ಯಾರಾದ್ರೂ ಹೋಗಿ ಅಡ್ವಾನ್ಸ್ ಏನಾದರೂ ಕೊಟ್ಟರೆ ಕೈ ತಪ್ಪಿ ಹೋಗುತ್ತೆ' ಅಂದ ಅವರ ಮಾತು ಕೇಳಿ ಸ್ವಲ್ಪ ಗಲಿಬಿಲಿಗೊಂಡ ಮಗ. ಈಗ ಇರೋ ಮನೇನೆ ನನ್ನ ಹೆಸರಿಗೆ ಬರಿತೀನಿ ಅಂದ ಅವರ ಮಾತು ಒಂದು ಗಳಿಗೆ ನೋವುಂಟು ಮಾಡಿತು. ಕನಸು ಮನಸಿನಲ್ಲೂ ಅಪ್ಪನ ಗೆರೆ ದಾಟದ ಮುಕುಂದ ನಂಬರ್ ಕನೆಕ್ಟ್ ಮಾಡಿ ಆ ಕಡೆಯಿಂದ ಹಲೋ ಕೇಳಿದ ಕೂಡಲೆ ಅಪ್ಪನ ಕೈಗೆ ಫೋನ್ ಕೊಟ್ಟ. ಅಪ್ಪ ಹಾಲಲ್ಲೇ ಅಡ್ಡಾಡ್ತಾ ಮಾತಾಡತೊಡಗಿ ಕೊನೆಗೆ 'ಆಯ್ತು... ಆಯ್ತು, ಆಗಲಿ, ಹಂಗೇ ಮಾಡೋಣ' ಎನ್ನುತ್ತಾ ಮಾತು ಮುಗಿಸಿ ಮಗನಿಗೆ ಮೊಬೈಲ್ ಹಿಂದಿರುಗಿಸಿದರು. ತಿಂಡಿಯ ಹೊತ್ತಾಗಿತ್ತು. 'ನೋಡು ಸುನಂದಾ ಎಲ್ಲಾ ಒಳ್ಳೇದಕ್ಕೇ... ನಾನು ಇನ್ನೂ ಮಾತು ಶುರುನೇ ಮಾಡ್ಲಿಲ್ಲ... ಅವರೇ ಒಂದೂ ಹತ್ತಕ್ಕೆ ರಿಜಿಸ್ಟರ್ ಮಾಡ್ಸಿಕೊಳಿ ಸಾರ್. ಯಾಕೋ ನಿಮಗೇ ಈ ಪ್ರಾಪರ್ಟಿ ಕೊಡಬೇಕೂಂತ ನನ್ನ ಮನಸ್ಸಿಗೆ ಬಂದಿತ್ತು. ರಾತ್ರಿ ಮಾಲಿನಿಯ ಅಮ್ಮ ನನ್ನ ಕನಸಿನಲ್ಲಿ ಬಂದು ಮುಕುಂದನೂ ನಮ್ಮ ಮಗನೇ ಅಂದಂಗಾಯ್ತು, ನನಗಂತೂ ಆಶ್ಚರ್ಯ... ಅಂದರು ಆ ಓನರ್', ಎನ್ನುತ್ತಾ ಅಡುಗೆಮನೆ ಕಡೆ ಹೋದರು.

ಪವಾಡವೆಂಬಂತೆ ನಾಲ್ಕೇ ದಿನಗಳಲ್ಲಿ ಮುಕುಂದನ ಹೆಸರಿಗೆ ಪ್ರಾಪರ್ಟಿ ರಿಜಿಸ್ಟರ್ ಆಯಿತು. ಪ್ರಾಪರ್ಟಿ ಮಾಲಿನಿ ಹೆಸರಿನಲ್ಲಿತ್ತು. ಪತ್ರಗಳಿಗೆ ಸಹಿ ಮಾಡಲು ಅವಳೂ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದಿದ್ದಳು. ಓನರ್ ಶಿವರಾಮು, 'ಎರಡು ಮೂರು ದಿನಗಳಲ್ಲಿ ಮನೆ ಖಾಲಿ ಮಾಡಿದ ಕೂಡಲೆ ಫೋನ್ ಮಾಡ್ತೀನಿ, ನೀವು ಬಂದು ಮನೆ ಕೀ ತಗೋಬೌದು' ಅಂದಿದ್ದರು. ಅದೇ ಪ್ರಕಾರ ಒಂದು ದಿನ ಬೆಳಗ್ಗೆ ಫೋನ್ ಬಂತು. 'ನಿಮ್ಮಮ್ಮ ಪ್ರಾಪರ್ಟಿ ನೋಡಿಲ್ಲ, ನೀವಿಬ್ಬರೇ ಹೋಗಿ ಬನ್ನಿ' ಅಂದರು ಮುಕುಂದನ ಅಪ್ಪ.

## 4

ಹಾಲ್‌ನಲ್ಲೇ ಬೀಗದ ಕೈಗಳನ್ನು ತೂಗುಹಾಕುವ ಚಿಕ್ಕ ಮರದ ಹಲಗೆಯ ಒಂದು ಕೊಕ್ಕೆಯಲ್ಲಿ ಪ್ರಾಪರ್ಟಿಯ ಎರಡು ಉದ್ದದ, ಒಂದು ಚಿಕ್ಕದಾಗಿದ್ದ ಬೀಗದ ಕೈಗಳು ಸೇರಿಕೊಂಡವು. ಕೃಷ್ಣೇಗೌಡರು ತಿಂಡಿ, ಕಾಫಿ ಮುಗಿಸಿ ಗರಾಜಿನ ಬಾಗಿಲು ತೆಗೆದು ಕಾರನ್ನು ಹೊರಗೆ ನಿಲ್ಲಿಸಿ, ಒಳಗೆ ಬಂದು ಪ್ರಾಪರ್ಟಿಯ ಬೀಗದ ಕೈಗಳನ್ನು ತೆಗೆದುಕೊಂಡರು. 'ಮನೆ ಕಡೆ ಹೋಗಿ ಬರ್ತೀನಿ' ಎಂದು ಹೆಂಡತಿಗೆ ಹೇಳಿ ಹೊರಟರು. ಮಗನಿಗೆ ಪ್ರಾಪರ್ಟಿ ಮಾಡಿಕೊಡೋದ್ರಲ್ಲಿ ಗಂಡ ತೋರುತ್ತಿರುವ ಆಸಕ್ತಿ ನೋಡಿ ಆಶ್ಚರ್ಯಪಡುತ್ತಾ ಗೇಟ್ ಹಾಕಿಕೊಂಡು ಒಳಬಂದರು.

ಮನೆ ಮುಂದೆ ಕಾರು ನಿಲ್ಲಿಸಿದಾಗ, ಗೌಡರು ಮೊದಲ ಬಾರಿಗೆ ಆ ಮನೆಯ ಇಂಚಿಂಚನ್ನೂ ತದೇಕಚಿತ್ತರಾಗಿ ನೋಡತೊಡಗಿದರು. 'ಲೀಸ್/ಸೇಲ್' ಬೋರ್ಡ್ ಇರಲಿಲ್ಲ. ಪಕ್ಕದಲ್ಲೇ ಕಾಂಪೌಂಡಿಗೆ ಹದ್ದಿಸಿದ ಚಿಕ್ಕ ಕಪ್ಪು ಕಲ್ಲಿನ ಮೇಲೆ ಚಿಕ್ಕ ಅಕ್ಷರಗಳಲ್ಲಿ 'ಆಕಾಶ ಮಲ್ಲಿಗೆ'